|| ಶ್ರೀ ಹರಿಃ ||
ವಸುದೇವಸುತಂ(ನ್) ದೇವಂ(ಙ) ಕಂಸಚಾಣೂರಮರ್ದನಂ
|
ದೇವಕೀಪರಮಾನಂದಂ(ಙ) ಕೃಷ್ಣಂ(ಮ್) ವಂದೇ
ಜಗದ್ಗುರುಮ್ ||

# || ಶ್ರೀಮದ್ಭಗವದ್ಗೀತಾ ಅರ್ಥವಿವೇಚನೆ ಮತ್ತು ವ್ಯಾಖ್ಯಾನ ||

**ಅಧ್ಯಾಯ 4: ಜ್ಞಾನಕರ್ಮಸಂನ್ಯಾಸಯೋಗ**

1/4 (ಶ್ಲೋಕ 1-10), ಶನಿವಾರ, 28 ಅಕ್ಟೋಬರ್ 2023

**ವಿವೇಚನಕಾರರು: ಗೀತಾ ವಿದುಷಿ ಸೌ. ವಂದನ ವರ್ಣೇಕರ್ ಜಿ**

YouTube ಲಿಂಕ್: https://youtu.be/ICS4n60Fm7Q

## ಕರ್ಮೋಪದೇಶದ ಪರಮ ಪ್ರಾಚೀನತೆ, ಭಗವಂತನ ಅವತಾರದ ರಹಸ್ಯ

ಭಗವಂತನ ನಾಮ ಸ್ಮರಣೆ ಮಾಡುತ್ತಾ ದೀಪ ಬೆಳಗುವ ಮೂಲಕ ಇಂದಿನ ವಿವೇಚನಾ ಸತ್ರವನ್ನು ಪ್ರಾರಂಭ ಮಾಡಲಾಯಿತು. ಮನುಷ್ಯನು ತನ್ನ ಜೀವಿತಾವಧಿಯಲ್ಲಿ ಕರ್ಮವನ್ನು ಮಾಡುವುದೇ ಶ್ರೇಷ್ಠ ಎಂಬ ವಿಚಾರವನ್ನು ಮೂರನೇ ಅಧ್ಯಾಯವು ನಮಗೆ ತಿಳಿಸಿಕೊಟ್ಟಿತು. ಕರ್ಮವನ್ನು ಹೇಗೆ ಮಾಡಬೇಕು, ಮಾಡಿದ ಕರ್ಮವನ್ನು ಭಗವಂತನಿಗೆ ಅರ್ಪಣೆ ಮಾಡಿ, ಕರ್ಮವನ್ನು ಕರ್ಮಯೋಗವನ್ನಾಗಿಸಿಕೊಳ್ಳುವ ಉಪಾಯಗಳನ್ನು ಭಗವಂತನೇ ತಿಳಿಸಿಕೊಟ್ಟಿದ್ದಾನೆ. ಯುದ್ಧದಂಥ ಘೋರ ಕೃತ್ಯವೇ ಆದರೂ, ಅದು ಲೋಕ ಕಲ್ಯಾಣಕ್ಕಾಗಿಯಾದರೆ, ಅದು ಭಗವಂತನು ನಮಗಾಗಿ ನಿಯೋಜಿಸಿದ ಕೆಲಸ ಎಂದು ತಿಳಿದು ಮಾಡಿದಾಗ ಆ ಕರ್ಮ ಬಂಧನದಿಂದ ಮುಕ್ತಿ ಸಾಧ್ಯ. ಪೂಜ್ಯ ಜ್ಞಾನೇಶ್ವರ್ ಮಹಾರಾಜರು ಕೂಡಾ ತಮ್ಮ "ಜ್ಞಾನೇಶ್ವರಿ"ಯಲ್ಲಿ ಇದನ್ನೇ ಹೇಳುತ್ತಾರೆ. ಮಾಡಿದ ಕರ್ಮದಿಂದ, ನನ್ನತನವನ್ನು ಕಳೆದರೆ, ಇದು ಭಗವಂತನ ಕೆಲಸ, ಭಗವಂತನಿಗಾಗಿ ಮಾಡುತ್ತಿರುವ ಕೆಲಸ ಎಂಬ ಸಮರ್ಪಣೆಯ ಭಾವದಿಂದ ಮಾಡಿದರೆ, ಆ ಕರ್ಮ ಬಂಧನದಿಂದ ಮುಕ್ತಿ ಸಾಧ್ಯ. ಆದರೆ ಮನುಷ್ಯನು ಈ ಆತ್ಮ ತತ್ತ್ವವನ್ನು ಯಾವತ್ತೂ ಮರೆತು ಜೀವಿಸುತ್ತಾನೆ. ಶರೀರ, ಮನಸ್ಸು, ಬುದ್ಧಿ ಮತ್ತು ಇಂದ್ರಿಯವೆಂಬ ನಾಲ್ಕು ವಿಷಯಗಳಲ್ಲಿ ಮುಳುಗುವ ಮನುಷ್ಯನಿಗೆ ಆತ್ಮ ತತ್ತ್ವವು ಮರೆತು ಹೋಗುತ್ತದೆ.

ಆತ್ಮ ಜ್ಞಾನವನ್ನು ಬೋಧಿಸುವ ಭಗವದ್ಗೀತೆಯಂಥ ಗ್ರಂಥಗಳನ್ನು ನಾವು ಕಲಿತು ಅರ್ಥೈಸಿಕೊಂಡರೆ, ಆತ್ಮ ತತ್ತ್ವದ ಅರಿವು ಮೂಡುತ್ತದೆ. ಇವುಗಳನ್ನು ಕಲಿಯಲು ಎಲ್ಲೋ ಹಿಮಾಲಯಕ್ಕೋ, ದಟ್ಟ ಕಾನನಕ್ಕೋ ಹೋಗುವ ಅವಶ್ಯಕತೆಯಿಲ್ಲ. ಹೇಗೆ ಚಂದ್ರಮನ ಶೀತಲ ಕಾಂತಿಯನ್ನು ಕಮಲದ ಹೂವು ತಾನು ಇದ್ದ ಜಾಗದಿಂದಲೇ ಹೀರುತ್ತದೆಯೋ ಹಾಗೆ ಮನುಷ್ಯನು ಕೂಡಾ ತಾನು ಜೀವಿಸುತ್ತಿರುವ ಜೀವನದ ಜೊತೆ ಜೊತೆಗೆ 'ಗೀತೆ'ಯಂಥ ಪವಿತ್ರ ಗ್ರಂಥಗಳನ್ನು ಅರಿತು ಉದ್ಧಾರವಾಗಬಹುದಾಗಿದೆ.

**ಕಾ ಆಪುಲಾ ಠಾವ ನ ಸಾಂಡಿತಾ**
**ಆಲಿಂಗೀಜೆ ಚಂದ್ರು ಪ್ರಕಟತಾ //**
**ತೋ ಅನುರಾಗೂ ಭೋಗಿತಾ**
**ಕಮಲಿನೀ ಜಾಣೇ // -** ಇದು ಪೂಜ್ಯ ಜ್ಞಾನೇಶ್ವರ್ ಮಹಾರಾಜರ ಸುಂದರ ಓವಿ.

ಕಮಲದ ಹೂವಿನಂತೆ, ಮನುಷ್ಯನು ತನ್ನ ನಿತ್ಯ ಜೀವನವನ್ನು ಸಾಗಿಸುತ್ತಾ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬಹುದಾಗಿದೆ. ಕರ್ಮವನ್ನು ಕರ್ಮಯೋಗವನ್ನಾಗಿಸಿ ಜೀವನವನ್ನು ಪಾವನಗೊಳಿಸಿಕೊಳ್ಳಲು ಸಾಧ್ಯ. ಇವೆಲ್ಲವೂ ಭಗವಂತನ ವಾಣಿಯಾಯಿತು. ಇದನ್ನು ಕೇಳಿದ ಅರ್ಜುನನಿಗೆ, ಇವೆಲ್ಲ ಸಾಧ್ಯವೇ ಎಂಬ ಸಂಶಯ ಮೂಡತೊಡಗಿತು. ಪ್ರತಿ ಕ್ಷಣವೂ ಭಗವಂತನನ್ನು ಸ್ಮರಣೆ ಮಾಡಿ ಕರ್ಮ ಮಾಡುವುದು ಸುಲಭ ಸಾಧ್ಯವೇ? ಎಂಬ ಪ್ರಶ್ನೆ ಅರ್ಜುನನನ್ನೂ ಕಾಡಿತು. ಇದನ್ನು ಮನಗಂಡ ಭಗವಂತನು ಕರ್ಮಯೋಗದಿಂದ ಮುಂದಿನ ತನ್ನ ವಿವರಣೆಯನ್ನು ಕೊಡಲು ಮುಂದಾಗುತ್ತಾನೆ.

**4.1**

**ಶ್ರೀಭಗವಾನುವಾಚ**
**ಇಮಂ(ಮ್) ವಿವಸ್ವತೇ ಯೋಗಂ(ಮ್), ಪ್ರೋಕ್ತವಾನಹಮವ್ಯಯಮ್**
**ವಿವಸ್ವಾನ್ಮನವೇ ಪ್ರಾಹ, ಮನುರಿಕ್ಷ್ವಾಕವೇಽಬ್ರವೀತ್ ॥1 ॥**

ನಾನು ಈ ಅವಿನಾಶಿಯಾದ ಯೋಗವನ್ನು ಕಲ್ಪದ ಆದಿಯಲ್ಲಿ ಸೂರ್ಯನಿಗೆ ಹೇಳಿದೆನು ಮತ್ತು ಸೂರ್ಯನು ತನ್ನ ಮಗ ಮನುವಿಗೆ ಹೇಳಿದನು ಮತ್ತು ಮನು ತನ್ನ ಮಗ ರಾಜಾ ಇಕ್ಷ್ವಾಕುವಿಗೆ ಹೇಳಿದನು.

ಅವಿನಾಶಿಯೂ, ಸನಾತನವೂ ಆದ ಕರ್ಮಯೋಗದ ಮಹತ್ವವನ್ನು ಭಗವಂತನು ಹೇಳುತ್ತಿರುವುದು ಇದೇ ಮೊದಲಲ್ಲ. ಅವಿನಾಶಿಯಾದ ಯೋಗ ವಿಜ್ಞಾನವನ್ನು ಭಗವಂತನು ಮೊದಲು ಸೂರ್ಯನಿಗೆ ಹೇಳಿದನು. ಅವನು ಅದನ್ನು ಮಾನವಕುಲದ ತಂದೆಯಾದ ಮನುವಿಗೆ ಹೇಳಿದನು. ಮನುವು ಇಕ್ಷ್ವಾಕು ರಾಜನಿಗೆ ಹೇಳಿದನು. ಹೀಗೆ ಈ ಜ್ಞಾನಧಾರೆಯು ತಲೆಮಾರಿನಿಂದ ತಲೆಮಾರಿಗೆ ಪ್ರವಹಿಸುತ್ತಾ ಬಂದಿದೆ. ಕರ್ಮಯೋಗ ಸಾಧನೆಯು ಪರಮ ಪವಿತ್ರವಾದ ಸಾಧನೆಯಾಗಿದೆ.

ಪರಮ ಭಕ್ತರಾದ, ಭಕ್ತಿಯ ಪ್ರಸಾರಕರಾದ ನಾರದ ಮಹರ್ಷಿಗಳಿಗೆ ತಮ್ಮ ಕರ್ತವ್ಯದ ಬಗ್ಗೆ ಅತಿಯಾದ ಹೆಮ್ಮೆ ಉಂಟಾಯಿತು. ತನಗಿಂತ ಶ್ರೇಷ್ಠ ಭಕ್ತರು ಯಾರೂ ಇರಲು ಸಾಧ್ಯವಿಲ್ಲ ಎಂಬ ಅಹಂ ಭಾವ ಉಂಟಾಯಿತು. ಅದರ ಜೊತೆಗೆ ಈ ಮಾತನ್ನು ಭಗವಂತನ ಬಾಯಿಯಿಂದಲೇ ಕೇಳುವ ಲಾಲಸೆಯೂ ಉಂಟಾಯಿತು. ಅವರು ಈ ಇಚ್ಛೆಯೊಂದಿಗೆ ನಾರಾಯಣನ ಎದುರು ಹೋಗಿ ನಿಂತರು. ಪರಮಾತ್ಮನ ಬಳಿ, "ನಿಮ್ಮ ಶ್ರೇಷ್ಠ ಭಕ್ತ ಯಾರೆಂದು ತಿಳಿದುಕೊಳ್ಳುವ ಆಸೆಯಾಗಿದೆ" ಎಂದು ಹೇಳಿದರು. ನಾರದರ ಮನದ ಇಂಗಿತವನ್ನು ಅರಿತ ಭಗವಂತನು, "ಹಾಗಾದರೆ ನಾನು ನಿನ್ನನ್ನು ಅವನ ಬಳಿಗೇ ಕರೆದುಕೊಂಡು ಹೋಗುತ್ತೇನೆ" ಎಂದು ಹೇಳಿದನು. ನಾರದರಿಗೆ ಪರಮಾಶ್ಚರ್ಯವಾಯಿತು. ಭಗವಂತನು ತನ್ನನ್ನು ಬಿಟ್ಟು ಇನ್ನೊಬ್ಬರನ್ನು ಶ್ರೇಷ್ಠ ಭಕ್ತ ಎನ್ನುತ್ತಿದ್ದಾನಲ್ಲ! ಎಂಬ ಬೇಸರವೂ ಆಯಿತು. ಆದರೂ ನಾರಾಯಣನ ಜೊತೆ ಆ ಭಕ್ತನನ್ನು ನೋಡಲು ನಾರದ ಮಹರ್ಷಿಗಳು ಹೊರಟರು. ಭಗವಂತನು ಭೂಲೋಕದಲ್ಲಿರುವ ಒಬ್ಬ ರೈತನ ಮನೆಯ ಎದಿರು ಬಂದು ನಿಂತನು. ಆ ರೈತನನ್ನು ತೋರಿಸುತ್ತಾ ಇವನೇ ನನ್ನ ಶ್ರೇಷ್ಠ ಭಕ್ತ ಎಂಬ ಭಾವದಿಂದ ಭಗವಂತನು ನೋಡಿದನು. ಆ ರೈತನು ತನ್ನ ನಿತ್ಯದ ರೈತಾಪಿ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದನು. ಮತ್ತು ತನ್ನ ಎಡೆಬಿಡದ ಕೆಲಸಗಳ ಮಧ್ಯದಲ್ಲಿ ಗೋವಿಂದನ ನಾಮ ಸ್ಮರಣೆಯನ್ನೂ ಮಾಡುತ್ತಿದ್ದನು. ನಾರದರು ಇವನನ್ನು ನೋಡಿ, "ಭಗವಂತ! ಇವನು ತನ್ನ ಕೆಲಸಗಳ ಮಧ್ಯದಲ್ಲಿ ಮಾತ್ರ ನಿನ್ನ ನಾಮ ಸ್ಮರಣೆ ಮಾಡುತ್ತಿದ್ದಾನಲ್ಲ? ಇವನೆಂಥ ಭಕ್ತ?" ಎಂದು ಕೇಳಿದರು. ಅದಕ್ಕೆ ಭಗವಂತನು ಮುಗುಳ್ನಗುತ್ತಾ "ಮಹರ್ಷಿಗಳೇ ಒಂದು ಕೆಲಸ ಮಾಡಿರಿ. ಇಲ್ಲಿ ಇರುವ ಬಿಂದಿಗೆಯ ತುಂಬಾ ನೀರನ್ನು ತೆಗೆದುಕೊಂಡು ಬನ್ನಿರಿ. ಒಂದು ಎಚ್ಚರವಿರಲಿ. ಬಿಂದಿಗೆಯಿಂದ ಒಂದು ಹನಿ ಕೂಡಾ ನೀರು ಚೆಲ್ಲದಂತೆ ನೋಡಿಕೊಂಡು ತನ್ನಿ" ಎಂದು ನಾರದ ಮಹರ್ಷಿಗಳಿಗೆ ಹೇಳಿದನು. ನಾರದರು ಭಗವಂತನ ಆಜ್ಞೆಯನ್ನು ಯಥಾವತ್ ಪಾಲಿಸಿದರು. ಭಗವಂತನ ಎದುರು ಬಿಂದಿಗೆಯನ್ನು ಹಿಡಿದು, "ಒಂದು ಹನಿ ಕೂಡಾ ನೀರು ಚೆಲ್ಲದಂತೆ ತಂದಿದ್ದೇನೆ" ಎಂದರು. ಅದಕ್ಕೆ ಭಗವಂತನು, "ಹೀಗೆ ನೀರು ತರುವಾಗ ಎಷ್ಟು ಸಲ ನಾರಾಯಣನನ್ನು ಸ್ಮರಣೆ ಮಾಡಿದಿರಿ? ಮಹರ್ಷಿಗಳೇ!" ಎಂದು ಕೇಳಿದನು. ಅದಕ್ಕೆ ಮಹರ್ಷಿಗಳು, "ನನ್ನ ಗಮನವೆಲ್ಲ ಬಿಂದಿಗೆಯ ಕಡೆ ಇತ್ತು, ನೀರು ಚೆಲ್ಲದಂತೆ ಆ ಕಡೆಗೆ ಗಮನ ಹರಿಸಿದ್ದರಿಂದ, ನಿನ್ನ ನಾಮ ಸ್ಮರಣೆ ಮಾಡಲು ಸಾಧ್ಯವಾಗಲಿಲ್ಲ ಪ್ರಭು!" ಎಂದು ಹೇಳಿದರು. ಈ ಕಾರಣದಿಂದಲೇ ಇವರು ಶ್ರೇಷ್ಠ ಎಂದು ತಾನು ಹೇಳಿದ್ದು ಎಂದು ಭಗವಂತನು ಮುಗುಳ್ನಕ್ಕನು. ಕರ್ತವ್ಯ ಕರ್ಮಗಳನ್ನು ಮಾಡುತ್ತಾ ಭಗವಂತನನ್ನು ನೆನಪಿಸಿಕೊಳ್ಳುವುದು ಶ್ರೇಷ್ಠತಮವಾದ ಯೋಗವಾಗಿದೆ. ನಿತ್ಯ ನಿರಂತರವಾಗಿ ಭಗವಂತನನ್ನು ಸ್ಮರಣೆ ಮಾಡುವುದು ಪರಮ ದಿವ್ಯವಾದ ಪುರುಷಾರ್ಥ

ಸಾಧನೆಯಾಗಿದೆ. ನಾರದ ಮಹರ್ಷಿಗಳೂ ಇದನ್ನು ಒಪ್ಪಿಕೊಂಡರು.

ಸೂರ್ಯನು ಈ ಯೋಗಶಾಸ್ತ್ರವನ್ನು ತಿಳಿದು ಅದನ್ನು ನಿರಂತರವಾಗಿ ಪಾಲಿಸುತ್ತಿದ್ದಾನೆ. ಪೂಜ್ಯ ಗುರುಗಳು ಹೇಳುವಂತೆ, "No vacation, no discrimination, no expectation." - ಇವು ಕರ್ಮಯೋಗ ಮೂರು ಸಿದ್ಧಾಂತಗಳು.

No vacation (ರಜೆಯಿಲ್ಲ) - ಸೂರ್ಯನು ರಜೆ ಹಾಕಿದ ದಿನವೇ ಇಲ್ಲ. ಅವನು ಯಾವತ್ತೂ ಬೆಳಗುತ್ತಿರುತ್ತಾನೆ.

No discrimination (ಬೇಧಭಾವವಿಲ್ಲ) - ಈ ಭೂಮಿಯ ಮೇಲಿರುವ ಚರಾಚರ ಜೀವ ಜಗತ್ತಿಗೆ ಸೂರ್ಯನ ಕಿರಣವು ಲಭ್ಯವಿದೆ. ಅವನು ಯಾವತ್ತೂ ಬೇಧಭಾವ ತೋರಿಲ್ಲ.

ಜ್ಞಾನೇಶ್ವರ್ ಮಹಾರಾಜರು ನೀರಿನ ಉದಾಹರಣೆಯನ್ನು ಕೊಡುತ್ತಾರೆ. ನದಿಯಲ್ಲಿ ಹರಿಯುವ ನೀರು, ಹುಲಿ ಸಿಂಹದಂಥ ಕಾಡು ಪ್ರಾಣಿಗಳಿಗೂ ನೀರು ಕೊಡುತ್ತದೆ. ಹಸು ಕುರಿಗಳಿಗೂ ನೀರು ಕೊಡುತ್ತದೆ. ಅದು ಯಾವತ್ತೂ ತಾರತಮ್ಯ ಮಾಡುವುದಿಲ್ಲ.

No expectation (ನಿರೀಕ್ಷೆಯಿಲ್ಲ) - "ನೀನು ಇದನ್ನು ಕೊಟ್ಟರೆ ನಾನು ನಿನಗೆ ಬೆಳಕು ಕೊಡುತ್ತೇನೆ" ಎಂದು ಸೂರ್ಯನು ಯಾರಿಗೂ ಹೇಳಿಲ್ಲ. ಅಥವಾ ನಾನು ಬೆಳಕು ಕೊಡುತ್ತಿರುವ ಕಾರಣ, ನೀನೂ ನನಗೆ ಏನಾದರೂ ಸಹಾಯ ಮಾಡು ಎಂದು ಕೂಡಾ ಸೂರ್ಯನು ಯಾವತ್ತೂ ಕೇಳಿಲ್ಲ. ಅವನು ಅವಿರತವಾಗಿ ತನ್ನ ಕರ್ತವ್ಯವನ್ನು ಮಾಡುತ್ತಾ ಬಂದಿದ್ದಾನೆ.

ಕರ್ಮಯೋಗದ ಸಿದ್ಧಾಂತವನ್ನು ಸೂರ್ಯನು ಪಾಲಿಸಿ, ಜಗತ್ತಿಗೆ ಹೇಳಿದನು. ಆದರೆ ಕಾಲಕ್ರಮದಲ್ಲಿ ಅದು ನಶಿಸಿಹೋಯಿತು. ಈ ಕುರಿತು ಭಗವಂತನು ಮುಂದಿನ ಶ್ಲೋಕದಲ್ಲಿ ವಿವರಿಸಿದ್ದಾನೆ.

**4.2**

**ಏವಂ(ಮ್) ಪರಂಪರಾಪ್ರಾಪ್ತಮ್, ಇಮಂ(ಮ್) ರಾಜರ್ಷಯೋ ವಿದುಃ**
**ಸ ಕಾಲೇನೇಹ ಮಹತಾ, ಯೋಗೋ ನಷ್ಟಃ(ಫ್) ಪರಂತಪ ॥2॥**

ಈ ರೀತಿ ಪರಂಪರೆಯಿಂದ ಬಂದಿರುವ ಈ ಯೋಗವನ್ನು ರಾಜರ್ಷಿಗಳು ತಿಳಿದುಕೊಂಡಿದ್ದರು. ಆದರೆ ಎಲೈ ಅರ್ಜುನ ! ಆ ಯೋಗವು ಬಹಳಕಾಲದಿಂದ ಈ ಭೂಲೋಕದಲ್ಲಿ ಪ್ರಾಯಶಃ ನಶಿಸಿ ಹೋಗಿತ್ತು.

ಪರರಿಗೆ ತಾಪವನ್ನು ಕೊಡುವಷ್ಟು ಶಕ್ತಿ ಹೊಂದಿದ ಪರಂತಪ (ಅರ್ಜುನ) ನನ್ನು ಕುರಿತು ಭಗವಂತನು ಕರ್ಮ ಸಿದ್ಧಾಂತವು ನಶಿಸಿ ಹೋದ ಬಗೆಯನ್ನು ವಿವರಿಸುತ್ತಾನೆ.

ಗುರು-ಶಿಷ್ಯ ಪರಂಪರೆಯಿಂದ ಈ ಯೋಗ ಜ್ಞಾನವನ್ನು ರಾಜರ್ಷಿಗಳು ತಿಳಿದುಕೊಂಡರು. ಆದರೆ ಕಾಲ ಚಕ್ರವು ಮುಂದುವರಿದಂತೆ ಈ ವಿಜ್ಞಾನವು ನಶಿಸಿಹೋಯಿತು.

ಬ್ರಹ್ಮರ್ಷಿಗಳು ಮತ್ತು ರಾಜರ್ಷಿಗಳು - ಹೀಗೆ ಎರಡು ಬಗೆಯ ಜ್ಞಾನಿಗಳಿರುತ್ತಾರೆ.

ಬ್ರಹ್ಮರ್ಷಿಗಳು ಎಂದರೆ ಪರಮ ಜ್ಞಾನಿಗಳು. ಅವರು ಕರ್ಮದ ಕಿರಿಕಿರಿಯನ್ನು ಅಂಟಿಸಿಕೊಳ್ಳುವವರಲ್ಲ. ಯಾವತ್ತೂ ಜಪ-ತಪ, ಧ್ಯಾನದಲ್ಲಿ ಮುಳುಗಿರುತ್ತಾರೆ. ನಿವೃತ್ತಿ ಪ್ರಧಾನರಾಗಿರುತ್ತಾರೆ.

ರಾಜರ್ಷಿಗಳು ಎಂದರೆ ಪರಮ ಜ್ಞಾನಿಗಳೂ ಹೌದು. ಅವರು ಪ್ರವೃತ್ತಿ ಪ್ರಧಾನರು. ಇವರು ಕರ್ಮಯೋಗಿಗಳು. ಇವರಿಗೆ ಕರ್ಮವು ಪ್ರಧಾನ. ಕರ್ಮ ಮಾಡುತ್ತಲೇ ಭಗವಂತನನ್ನು ನೆನಪಿಸಿಕೊಳ್ಳುವವರು ರಾಜರ್ಷಿಗಳು.

ಭಗವಂತನು ಇಲ್ಲಿ ರಾಜರ್ಷಿಗಳನ್ನು ಉಲ್ಲೇಖ ಮಾಡಿದ್ದಾನೆ. ಕರ್ಮಯೋಗದ ಸಿದ್ಧಾಂತವನ್ನು ರಾಜರ್ಷಿಗಳಿಗೆ

ತಾನು ಹೇಳಿದ್ದಾಗಿ ಭಗವಂತನು ಹೇಳುತ್ತಿದ್ದಾನೆ.

ಆ ನಂತರ ಕಾಲ ಚಕ್ರಕ್ಕೆ ಸಿಲುಕಿ ಈ ವಿಜ್ಞಾನವು ನಶಿಸಿ ಹೋಯಿತು.

**4.3**

**ಸ ಏವಾಯಂ(ಮ್) ಮಯಾ ತೇಽದ್ಯ, ಯೋಗಃ(ಫ್) ಪ್ರೋಕ್ತಃ(ಫ್) ಪುರಾತನಃ**
**ಭಕ್ತೋಽಸಿ ಮೇ ಸಖಾ ಚೇತಿ, ರಹಸ್ಯಂ(ಮ್) ಹ್ಯೇತದುತ್ತಮಮ್ ॥3॥**

ಅದೇ ಈ ಪುರಾತನವಾದ ಯೋಗವನ್ನು ಈಗ ನಾನು ನಿನಗೋಸ್ಕರವಾಗಿ ವರ್ಣಿಸಿದ್ದೇನೆ, ಏಕೆಂದರೆ ನೀನು ನನ್ನ ಭಕ್ತನೂ ಮತ್ತು ಪ್ರಿಯ ಸ್ನೇಹಿತನೂ ಆಗಿರುವುದರಿಂದ ಹಾಗೂ ಈ ಯೋಗ ಬಹಳ ಉತ್ತಮ ಮತ್ತು ರಹಸ್ಯ ಅರ್ಥಾತ್ ಮಾರ್ಮಿಕವಾದ ವಿಷಯವಾಗಿದೆ.

ಅತ್ಯಂತ ಪುರಾತನವಾದ ಅಥವಾ ಸನಾತನವಾದ ಈ ಯೋಗವಿಜ್ಞಾನವನ್ನು ಭಗವಂತನು ತನ್ನ ಆಪ್ತ ಸ್ನೇಹಿತನೂ, ಭಕ್ತನೂ ಆದ ಅರ್ಜುನನಿಗೆ ಈಗ ಮತ್ತೆ ಹೇಳುತ್ತಿದ್ದಾನೆ. ಅರ್ಜುನನಿಗೆ ಹೇಳುತ್ತಾ ಭಗವಂತನು ಈ ವಿಜ್ಞಾನವು ಪವಿತ್ರವೂ, ಉತ್ತಮವೂ ಮತ್ತು ರಹಸ್ಯಮಯವೂ ಆದದ್ದು ಎಂದು ಹೇಳುತ್ತಾನೆ. ರಹಸ್ಯಮಯವಾದದ್ದೆಲ್ಲ ಪವಿತ್ರವಾಗಿರಬೇಕೆಂದೇನೂ ಇಲ್ಲ. ಆದರೆ ಇಲ್ಲಿ ಭಗವಂತನು ಹೇಳುತ್ತಿರುವುದು ರಹಸ್ಯಮಯವಾದದ್ದರ ಜೊತೆಗೆ ಪವಿತ್ರವಾದದ್ದು ಕೂಡಾ ಆಗಿದೆ. ರಹಸ್ಯವಾದದ್ದನ್ನು ಯಾವತ್ತೂ ಪರಮಾಪ್ತರ ಬಳಿ ಮಾತ್ರ ಹೇಳಲಾಗುತ್ತದೆ. ಭಗವಂತನು ಅರ್ಜುನನನ್ನು ತನ್ನ ಪ್ರೀತಿಯ ಸ್ನೇಹಿತನೆಂದು, ತನ್ನ ಪ್ರಿಯ ಭಕ್ತನೆಂದು ಮೊದಲೇ ಹೇಳುತ್ತಿದ್ದಾನೆ. ಅರ್ಜುನನು ಕೂಡಾ ಸದಾ ಹಾಗೇ ನಡೆದುಕೊಂಡಿದ್ದಾನೆ. ಕೃಷ್ಣ ಮತ್ತು ಅರ್ಜುನರ ಸಂಬಂಧ, ಅವರಿಬ್ಬರೂ ಪರಸ್ಪರರನ್ನು ಪ್ರೀತಿಸುವ ಗೌರವಿಸುವ ಪರಿ ಇಡೀ ಜಗತ್ತಿಗೆ ಗೊತ್ತಿರುವ ವಿಷಯ. ಜ್ಞಾನೇಶ್ವರ್ ಮಹಾರಾಜರು ಇವರಿಬ್ಬರ ಸಂಬಂಧವನ್ನು ಸುಂದರವಾಗಿ ವರ್ಣಿಸಿದ್ದಾರೆ.

**ತೂ ಪ್ರೇಮಾಚಾ ಪುತಳಾ**
**ಭಕ್ತಿಚಾ ಜಿವ್ಹಾಳಾ /**
**ಮೈತ್ರಿಯೇಚಿ ಚಿತ್ಕಳಾ**
**ಧನುರ್ಧರಾ //**

ಭಗವಂತನು, "ನೀನು ನನಗೆ ಅತ್ಯಂತ ಪ್ರಿಯನು, ನೀನು ಭಕ್ತಿಯ ಜೀವಾಳವಾಗಿರುವೆ. ಮಿತ್ರತೆಯ ಚೈತನ್ಯವೇ ನೀನು, ಅರ್ಜುನಾ! ನೀನು ನನ್ನ ವಿಶ್ವಾಸ ಪಾತ್ರನಾಗಿರುವೆ" ಎಂದು ಹೇಳುತ್ತಾನೆ.

ಅರ್ಜುನನು ಒಳ್ಳೆಯ ಮನಸ್ಸಿನವನು, ಶುದ್ಧನು, ಅನ್ಯರನ್ನು ನಿಂದನೆ ಮಾಡದೇ ಇರುವವನು. ಆದ್ದರಿಂದ ಭಗವಂತನಿಗೆ ಅತ್ಯಂತ ಪ್ರೀತಿ ಪಾತ್ರನು. ಅರ್ಜುನನು ಕೂಡಾ ಭಗವಂತನನ್ನು ಅಷ್ಟೇ ಪೂಜಿಸಿದವನು. ಕುರುಕ್ಷೇತ್ರ ಯುದ್ಧಕ್ಕೂ ಮೊದಲು, ದುರ್ಯೋಧನ ಮತ್ತು ಅರ್ಜುನ ಇಬ್ಬರೂ ಕೃಷ್ಣನ ಬಳಿ ಹೋದಾಗ, ಕೃಷ್ಣನು ಒಂದು ಕಡೆ ನಿಃಶಸ್ತ್ರನಾದ ತನ್ನನ್ನೂ ಇನ್ನೊಂದು ಕಡೆ ತನ್ನ ನಾರಾಯಣಿ ಸೇನೆಯನ್ನು ಇಟ್ಟು, ಎರಡರಲ್ಲಿ ಆರಿಸಿಕೊಳ್ಳಲು ಹೇಳಿದಾಗ ಅರ್ಜುನನು ಕಿಂಚಿತ್ ಕೂಡಾ ಯೋಚಿಸದೇ ಶ್ರೀಕೃಷ್ಣನನ್ನು ಆರಿಸಿಕೊಂಡಿದ್ದನು. ಅವರಿಬ್ಬರ ಬಾಂಧವ್ಯ ಅಷ್ಟು ಪವಿತ್ರವಾದದ್ದು. ಆದ್ದರಿಂದ ಭಗವಂತನು ಈ ರಹಸ್ಯಮಯವಾದ ವಿಜ್ಞಾನವನ್ನು ಅರ್ಜುನನಿಗೆ ಮತ್ತೆ ತಿಳಿಸಲು ಮುಂದಾಗಿದ್ದಾನೆ.

**4.4**

**ಅರ್ಜುನ ಉವಾಚ**
**ಅಪರಂ(ಮ್) ಭವತೋ ಜನ್ಮ, ಪರಂ(ಙ್) ಜನ್ಮ ವಿವಸ್ವತಃ**

**ಕಥಮೇತದ್ವಿಜಾನೀಯಾಂ(ನ್), ತ್ವಮಾದೌ ಪ್ರೋಕ್ತವಾನಿತಿ ॥4॥**

ನಿನ್ನ ಜನ್ಮವಾದರೋ ಇತ್ತೀಚಿನದು ಮತ್ತು ಸೂರ್ಯನ ಜನ್ಮವು ಬಹಳ ಪುರಾತನವಾದದ್ದು ಅರ್ಥಾತ್ ಕಲ್ಪದ ಆದಿಯಲ್ಲಿ ಆದದ್ದು. ಆದುದರಿಂದ ಈ ಯೋಗವನ್ನು ಕಲ್ಪದ ಆದಿಯಲ್ಲಿ ಹೇಳಿದ್ದೆ ಎಂದು ನಾನು ಹೇಗೆ ತಿಳಿದುಕೊಳ್ಳಲಿ ?

ಅರ್ಜುನನು ಇನ್ನೂ ಚಿಂತಾಕ್ರಾಂತನಾದನು. ಅರ್ಜುನ ಮತ್ತು ಕೃಷ್ಣರು ಸಮ ವಯಸ್ಕರು. ಕೇವಲ ಮೂರರಿಂದ ನಾಲ್ಕು ವರ್ಷ ವ್ಯತ್ಯಾಸದಲ್ಲಿ ಜನಿಸಿದವರು. ಇಲ್ಲಿ ಭಗವಂತನು, ತಾನು ಸೂರ್ಯನಿಗೆ ಈ ಪುರಾತನವಾದ ಶಾಸ್ತ್ರವನ್ನು ಹೇಳಿದ್ದೇನೆ ಎಂಬುದನ್ನು ಕೇಳಿದ ಅರ್ಜುನನಿಗೆ ಭಗವಂತನ ವಾಣಿಯು ಇನ್ನಷ್ಟು ಗೊಂದಲ ತಂದಿತು. ಆದ್ದರಿಂದ ಅವನು ಭಗವಂತನನ್ನು ತಡೆದು ಈ ಪ್ರಶ್ನೆಯನ್ನು ಮಾಡಿದನು. "ಸೂರ್ಯನಾದರೋ ನಾವೆಲ್ಲ ಹುಟ್ಟುವುದಕ್ಕಿಂತಲೂ ಮೊದಲು ಇದ್ದವನು. ಈ ಕಲ್ಪದ ಆದಿಯಲ್ಲಿ ಸೂರ್ಯನ ಜನನವೂ ಆಗಿದೆ ಎಂದ ಮೇಲೆ, ನನ್ನ ಜೊತೆಯಲ್ಲಿ ಹುಟ್ಟಿದ ನೀನು ಹೇಗೆ ಕಲ್ಪದ ಆದಿಗೆ ಹೋಗಿ ಈ ಯೋಗವನ್ನು ಸೂರ್ಯನಿಗೆ ಹೇಳಲು ಸಾಧ್ಯ? ಇದನ್ನು ನಾನು ಹೇಗೆ ಅರ್ಥ ಮಾಡಿಕೊಳ್ಳಲಿ?" ಇದು ಅರ್ಜುನನ ಸಂಶಯವಾಗಿತ್ತು.

**4.5**

**ಶ್ರೀಭಗವಾನುವಾಚ**
**ಬಹೂನಿ ಮೇ ವ್ಯತೀತಾನಿ, ಜನ್ಮಾನಿ ತವ ಚಾರ್ಜುನ**
**ತಾನ್ಯಹಂ(ಮ್) ವೇದ ಸರ್ವಾಣಿ, ನ ತ್ವಂ(ಮ್) ವೇತ್ಥ ಪರಂತಪ ॥5॥**

ಶ್ರೀಕೃಷ್ಣ ಹೇಳಿದನು - ಎಲೈ ಅರ್ಜುನ ! ನನ್ನ ಮತ್ತು ನಿನ್ನ ಅನೇಕ ಜನ್ಮಗಳು ಆಗಿ ಹೋಗಿವೆ. ಆದರೆ ಎಲೈ ಅರ್ಜುನ ! ಅವುಗಳನ್ನೆಲ್ಲಾ ನೀನು ತಿಳಿಯಲಾರೆ ಮತ್ತು ನಾನು ತಿಳಿದಿರುತ್ತೇನೆ.

ಅರ್ಜುನನ ಸಂಶಯವನ್ನು ಬಗೆಹರಿಸಲು ಭಗವಂತನು ತನ್ನ ಮತ್ತು ಅರ್ಜುನನ ಜನ್ಮದ ಬಗ್ಗೆ ಹೇಳುತ್ತಾನೆ.

ಕೃಷ್ಣ ಮತ್ತು ಅರ್ಜುನರ ಜನ್ಮಕ್ಕೂ ಮೊದಲು ಅವರಿಬ್ಬರೂ ಹಲವು ಜನ್ಮಗಳನ್ನು ತಳೆದಿದ್ದಾರೆ. ಈಗ ಈ ಜನ್ಮಕ್ಕೆ ಬಂದಿದ್ದಾರೆ. ಭಗವಂತನು, "ನಮ್ಮಿಬ್ಬರದು ಇದೇ ಮೊದಲ ಜನ್ಮವಲ್ಲ, ಹಲವು ಜನ್ಮಗಳನ್ನು ಕಳೆದು ಈ ಜನ್ಮಕ್ಕೆ ಬಂದಿದ್ದೇವೆ. ಇದರ ಅರಿವು ನಿನಗಿಲ್ಲ, ಆದರೆ ಇದೆಲ್ಲದರ ಜ್ಞಾನ ನನಗಿದೆಯಪ್ಪಾ" ಎಂದು ಅರ್ಜುನನಿಗೆ ಹೇಳುತ್ತಾನೆ.

**ಮೀ ಜೇಣೇ ಜೇಣೇ ಅವಸರೇ**
**ಜೇ ಜೇ ಹೋಉನಿ ಅವತರೇ /**
**ತೇ ಸಮಸ್ತಹೀ ಸ್ಮರೇ**
**ಧನುರ್ಧರಾ //** - ಯಾವ ಯಾವ ಸಂದರ್ಭದಲ್ಲಿ ಯಾವ ಯಾವ ರೂಪದಲ್ಲಿ ಜನ್ಮವೆತ್ತಿದ್ದೇನೆ ಎಂಬುದು ಭಗವಂತನಿಗೆ ನೆನಪಿರುತ್ತದೆ. ಆದರೆ ಮನುಷ್ಯನಿಗೆ ಜನ್ಮ ಜನ್ಮಗಳ ಸ್ಮೃತಿ ಇರುವುದಿಲ್ಲ - ಎಂದು ಪೂಜ್ಯ ಜ್ಞಾನೇಶ್ವರ್ ಮಹಾರಾಜರು ಹೇಳುತ್ತಾರೆ.

ಜನ್ಮ ಜನ್ಮಾಂತರಗಳ ವಿಷಯಗಳು ತಿಳಿಯದಿದ್ದರೂ ಭಗವದ್ಗೀತೆಯಂಥ ಶಾಸ್ತ್ರಗಳನ್ನು ತಿಳಿಯುವುದರಿಂದ ಮನುಷ್ಯನಲ್ಲಿ ವಿವೇಕ ಬುದ್ಧಿಯು ಜಾಗೃತವಾಗುತ್ತದೆ. ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ಯೋಚಿಸುವ ವಿವೇಚನೆ ಮನುಷ್ಯನಿಗೆ ಬರುತ್ತದೆ.

**ಏನನ್ನು ಬದಲಿಸಲು ಸಾಧ್ಯವಿಲ್ಲವೋ ಅದನ್ನು ಎದುರಿಸುವ ಶಕ್ತಿ ಕೊಡು. ಏನನ್ನು ಬದಲಿಸಿಕೊಂಡು ಉದ್ಧಾರವಾಗಲು ಸಾಧ್ಯವೋ ಅದನ್ನು ಮಾಡುವ ಸಾಮರ್ಥ್ಯ ಕೊಡು. ಇವೆರಡನ್ನು ಸರಿಯಾಗಿ ತಿಳಿಯುವ ಜ್ಞಾನವನ್ನು ನನಗೆ ಕೊಡು** - ಎಂಬುದು ಸ್ವಾಮಿ ವಿವೇಕಾನಂದರು ಭಗವಂತನಲ್ಲಿ ಬೇಡಿದ ಪ್ರಾರ್ಥನೆ.

ಮನುಷ್ಯನು ವೇದ ಶಾಸ್ತ್ರಗಳನ್ನು ತಿಳಿದುಕೊಂಡು ತನ್ನಲ್ಲಿರುವ ವಿವೇಕ ಬುದ್ಧಿಯನ್ನು

ಚುರುಕುಗೊಳಿಸಿಕೊಳ್ಳಬೇಕು.

**4.6**

**ಅಜೋऽಪಿ ಸನ್ನವ್ಯಯಾತ್ಮಾ, ಭೂತಾನಾಮೀಶ್ವರೋऽಪಿ ಸನ್**
**ಪ್ರಕೃತಿಂ(ಮ್) ಸ್ವಾಮಧಿಷ್ಠಾಯ, ಸಂಭವಾಮ್ಯಾತ್ಮಮಾಯಯಾ ॥6॥**

ನಾನು ಅವಿನಾಶೀ ಸ್ವರೂಪಿ, ಜನ್ಮರಹಿತ, ಆದಾಗ್ಯೂ ಸಹ ಹಾಗೂ ಸಮಸ್ತ ಪ್ರಾಣಿಗಳಿಗೂ ಒಡೆಯನಾದರೂ, ನನ್ನ ಪ್ರಕೃತಿಯನ್ನು ಅಧೀನಮಾಡಿಕೊಂಡು ನನ್ನ ಯೋಗಮಾಯೆಯಿಂದ ಅವತರಿಸುತ್ತೇನೆ.

ರಹಸ್ಯಮಯವಾದ ಶಾಸ್ತ್ರವನ್ನು ಭಗವಂತನು ಈಗ ಒಂದೊಂದಾಗಿ ಅರ್ಜುನನಿಗೆ ಹೇಳಲು ಪ್ರಾರಂಭಿಸುತ್ತಾನೆ.

"Energy can neither be created nor be destroyed. It just changes it's form" - ಶಕ್ತಿಯನ್ನು ಸೃಷ್ಟಿಸಲೂ ಸಾಧ್ಯವಿಲ್ಲ, ನಾಶ ಮಾಡಲು ಸಾಧ್ಯವಿಲ್ಲ. ಅದು ತನ್ನ ರೂಪವನ್ನು ಬದಲಿಸುತ್ತದೆ.

ಪರಮಾತ್ಮ ತತ್ತ್ವವೆಂಬ ಚೈತನ್ಯ ಶಕ್ತಿಯೂ ಕೂಡಾ, ಸೃಷ್ಟಿಸಲು, ನಾಶ ಮಾಡಲು ಸಾಧ್ಯವಿಲ್ಲದ್ದು. ಪರಮಾತ್ಮ ತತ್ತ್ವವು ಜನ್ಮರಹಿತವಾದದ್ದು ಹಾಗೆಯೇ ನಾಶವಾಗದೇ ಇರುವಂಥದ್ದು. ಪರಮಾತ್ಮನು ಸಮಸ್ತ ಜೀವ ಜಗತ್ತಿನ ಒಡೆಯನು. ಅವನು ಈಶ್ವರನು. ಅವನೇ ಸೃಷ್ಟಿಯ ನಿಯಂತ್ರಕನು, ನಿಯಾಮಕನು. ಸಂಪೂರ್ಣ ಜಗತ್ತೇ ಭಗವಂತನು. ಆದರೆ ಸಮಯ ಸಂದರ್ಭಗಳಲ್ಲಿ ಪರಮಾತ್ಮನು ತನ್ನ ಅಂತರಂಗದ ಶಕ್ತಿಯಿಂದ ದಿವ್ಯರೂಪಗಳಲ್ಲಿ ಅವತರಿಸುತ್ತಾನೆ. ತನ್ನದೇ ಪ್ರಕೃತಿಯನ್ನು ಅಧೀನವಾಗಿಸಿಕೊಂಡು ಯೋಗ ಮಾಯೆಯಿಂದ ಪರಮಾತ್ಮನು ಅವತಾರವೆತ್ತುತ್ತಾನೆ. ಪ್ರಕಟವಾಗುತ್ತಾನೆ. ಅವ್ಯಕ್ತ ರೂಪದ ಚೈತನ್ಯ ತತ್ತ್ವವು ವ್ಯಕ್ತ ರೂಪದಲ್ಲಿ ಜನ್ಮ ತಾಳುತ್ತದೆ. ಗುಣಾತೀತನಾದ ಭಗವಂತನು ಗುಣಾಢ್ಯನಾಗಿ ಅವತರಿಸಿ ಬರುತ್ತಾನೆ.

ಮನುಷ್ಯನ ಜನ್ಮಕ್ಕೂ ಭಗವಂತನ ಜನ್ಮಕ್ಕೂ ವ್ಯತ್ಯಾಸವಿರುತ್ತದೆ. ಮನುಷ್ಯನು ಪ್ರಕೃತಿಯ ಅಧೀನನು. ಆದರೆ ಪ್ರಕೃತಿಯು ಭಗವಂತನ ಅಧೀನದಲ್ಲಿರುತ್ತದೆ. ಆದ್ದರಿಂದ ಇಬ್ಬರ ಜನ್ಮವೂ ಬೇರೆ ಬೇರೆ. ಭಗವಂತನು ಯಾರ ವಶವೂ ಇಲ್ಲದೇ, ಯಾವ ಬಂಧನವೂ ಇಲ್ಲದೇ, ಅವತಾರ ತಾಳುತ್ತಾನೆ.

ತಾಯಿ ಯಶೋದೆಯು ಬಾಲಕ ಕೃಷ್ಣನನ್ನು ಕಟ್ಟಿ ಹಾಕಲು ಕೋಲು ಹಿಡಿದುಕೊಂಡು ಬರುತ್ತಾಳೆ. ಕೃಷ್ಣ ಕೈಗೆ ಸಿಗದೇ ಓಡಲು ಪ್ರಾರಂಭ ಮಾಡುತ್ತಾನೆ. ಯೋಶೋದೆಯು ಕೋಲು ಹಿಡಿದು ಅವನ ಹಿಂದೆ ಓಡುತ್ತಾಳೆ. ಕೃಷ್ಣನು ಓಡುತ್ತಲೇ, "ಅಮ್ಮ ಕೋಲನ್ನು ಬಿಸಾಕು" ಎಂದು ಕೂಗುತ್ತಾನೆ. ಎರಡು ಮೂರು ಸಲ ಅವನು ಹೇಳಿದ ಮೇಲೆ, ಓಡಿ ಸುಸ್ತಾದ ಯಶೋದೆ, ಕೋಲನ್ನು ಎಸೆಯುತ್ತಾಳೆ. ಆಗ ಬಾಲ ಕೃಷ್ಣನೇ ಓಡಿ ಬಂದು ಅವಳ ಕೈಯನ್ನು ತನ್ನ ಕೊರಳಿನ ಸುತ್ತ ಹಾಕಿಕೊಳ್ಳುತ್ತಾನೆ. ಅಹಂಕಾರದ ಕೋಲು ನಮ್ಮಿಂದ ಜಾರಿ ಹೋದಾಗ ಪರಮಾತ್ಮನು ತಾನೇ ನಮ್ಮ ಬಳಿಗೆ ಬರುತ್ತಾನೆ. ಎನ್ನುವುದಕ್ಕೆ ಇದು ಒಳ್ಳೆಯ ನಿದರ್ಶನವಾಗಿದೆ.

ಭಗವಂತನು ಮುಂದಿನ ಎರಡು ಶ್ಲೋಕಗಳಲ್ಲಿ ತಾನು ಅವತಾರವೆತ್ತುವ ಕಾರಣವನ್ನು ಹೇಳುತ್ತಾನೆ.

**4.7, 4.8**

**ಯದಾ ಯದಾ ಹಿ ಧರ್ಮಸ್ಯ, ಗ್ಲಾನಿರ್ಭವತಿ ಭಾರತ**
**ಅಭ್ಯುತ್ಥಾನಮಧರ್ಮಸ್ಯ, ತದಾತ್ಮಾನಂ(ಮ್) ಸೃಜಾಮ್ಯಹಮ್ ॥7॥**
**ಪರಿತ್ರಾಣಾಯ ಸಾಧೂನಾಂ(ಮ್), ವಿನಾಶಾಯ ಚ ದುಷ್ಕೃತಾಮ್**
**ಧರ್ಮಸಂಸ್ಥಾಪನಾರ್ಥಾಯ, ಸಂಭವಾಮಿ ಯುಗೇ ಯುಗೇ ॥8॥**

ಎಲೈ ಅರ್ಜುನ ! ಧರ್ಮಕ್ಕೆ ಚ್ಯುತಿ ಉಂಟಾದಾಗಲೆಲ್ಲಾ ಮತ್ತು ಅಧರ್ಮವು ಹೆಚ್ಚಿದಾಗಲೆಲ್ಲಾ ನಾನು ನನ್ನ ರೂಪವನ್ನು ರಚಿಸಿಕೊಳ್ಳುತ್ತೇನೆ ಅರ್ಥಾತ್ ಅವತಾರ ತಾಳುತ್ತೇನೆ. ಸಾಕಾರ ರೂಪದಿಂದ ಎಲ್ಲರಿಗೂ

ಗೋಚರಿಸುತ್ತೇನೆ.
ಸಾಧು ಸತ್ಪುರುಷರನ್ನು ಉದ್ಧಾರ ಮಾಡುವುದಕ್ಕಾಗಿಯೂ, ದುಷ್ಕರ್ಮಿಗಳನ್ನು ನಾಶ ಮಾಡುವುದಕ್ಕಾಗಿಯೂ ಮತ್ತು ಧರ್ಮವನ್ನು ಸಂಸ್ಥಾಪನೆ ಮಾಡುವುದಕ್ಕಾಗಿಯೂ ಯುಗ-ಯುಗಗಳಲ್ಲಿ ಅವತಾರ ತಾಳುತ್ತೇನೆ.

ಯಾವ ಕಾಲದಲ್ಲಿ ಧರ್ಮದ ಹಾನಿಯಾಗಿ ಅಧರ್ಮವು ತಾಂಡವವಾಡುತ್ತದೆಯೋ ಆಗೆಲ್ಲಾ ಭಗವಂತನು ತನಗೆ ಒಂದು ರೂಪವನ್ನು ರಚಿಸಿಕೊಂಡು, ಸಾಕಾರ ರೂಪನಾಗಿ ಈ ಜಗತ್ತಿನ ಜನರ ಮುಂದೆ ಪ್ರಕಟಗೊಳ್ಳುತ್ತಾನೆ.

ಧರ್ಮ ಎಂದರೆ ಕರ್ತವ್ಯ ಕರ್ಮ. ಮನುಷ್ಯನು ತನ್ನ ಆದ್ಯ ಕರ್ತವ್ಯಗಳನ್ನು ಮರೆತು ವರ್ತಿಸಲು ಪ್ರಾರಂಭಿಸಿದರೆ ಅಧರ್ಮವು ಹೆಚ್ಚಾಗುತ್ತದೆ. ಕರ್ತವ್ಯವೂ ಲೋಕ ಹಿತಕಾರಕವಾಗಿರಬೇಕು. ಲೋಕ ಕಲ್ಯಾಣಕ್ಕಾಗಿ ಮಾಡಬೇಕಾದ ಕರ್ಮಗಳನ್ನು ಮನುಷ್ಯನು ಮರೆತಾಗ ಭಗವಂತನ ಅವತಾರವಾಗುತ್ತದೆ. ಮನುಷ್ಯನು ಸ್ವಾರ್ಥ ಸಾಧನೆಗಾಗಿ ಅಧರ್ಮವನ್ನು ಆಚರಿಸಲು ಪ್ರಾರಂಭ ಮಾಡಿದರೆ ಆಗ ಭಗವಂತನು ಅವತರಿಸುತ್ತಾನೆ.

"ಸಜ್ಜನರನ್ನು ಕಾಪಾಡುವುದಕ್ಕೆ ದುಷ್ಟರನ್ನು ಸಂಹಾರ ಮಾಡುವುದಕ್ಕೆ ಲೋಕದಲ್ಲಿ ಧರ್ಮಸಂಸ್ಥಾಪನೆಗಾಗಿ, ಯುಗಯುಗಗಳಲ್ಲೂ ತಾನು ಅವತಾರವೆತ್ತಿ ಬರುತ್ತೇನೆ" ಎಂದು ಭಗವಂತನು ಹೇಳುತ್ತಾನೆ.

"ಸಂಘ ಶಕ್ತಿ ಕಲೌ ಯುಗೇ (ಸಂಘಟಿತ ಸಜ್ಜನರ ಶಕ್ತಿಯೇ ಕಲಿಯುಗದಲ್ಲಿ ಭಗವಂತ)" - ಎಂಬ ಉಕ್ತಿಯಿದೆ. ಕಲಿಯುಗದಲ್ಲಿ ಭಗವಂತನು ಹೇಗೆ ಅವತರಿಸುತ್ತಾನೆ ಎಂಬುದನ್ನು ಈ ವಾಕ್ಯ ತಿಳಿಸುತ್ತದೆ. ಒಳ್ಳೆಯ ವಿಚಾರಧಾರೆಗಳಿಂದ ಕೂಡಿದ ಸಂಘಟಿತ ಶಕ್ತಿಯಲ್ಲಿ ಭಗವಂತನಿರುತ್ತಾನೆ. ಕಲಿಯುಗದ ಪರಮಾತ್ಮ ತತ್ತ್ವ ಇದರಲ್ಲಿ ಅಡಗಿದೆ.

ಭಗವಂತನು ಬೇರೆ ಬೇರೆ ಅವತಾರಗಳಲ್ಲಿ ಬಂದು, ಧರ್ಮಸಂಸ್ಥಾಪನೆಯನ್ನು ಮಾಡುತ್ತಾನೆ.

ಶ್ರೀರಾಮನ ಅವತಾರವು ನಮಗೆಲ್ಲ ತಿಳಿದಿದೆ. ಪ್ರಭು ಶ್ರೀರಾಮನು ವನವಾಸಕ್ಕೆ ಹೋಗುವ ಸಂದರ್ಭದಲ್ಲಿ ಎಲ್ಲವನ್ನೂ ತ್ಯಜಿಸಿ ನಿಂತರೂ, ತನ್ನ ಧನುಸ್ಸನ್ನು ಮಾತ್ರ ತ್ಯಾಗ ಮಾಡುವುದಿಲ್ಲ. ಸೀತಾ ಮಾತೆಯು ಇದನ್ನು ಪ್ರಶ್ನೆ ಮಾಡುತ್ತಾಳೆ. ಅದಕ್ಕೆ ಶ್ರೀರಾಮನು ಆಮೇಲೆ ಇದಕ್ಕೆ ಉತ್ತರ ಕೊಡುತ್ತೇನೆ ಎಂದು, ತಮ್ಮ ಮತ್ತು ಮಡದಿಯ ಜೊತೆ ವನಕ್ಕೆ ತೆರಳುತ್ತಾನೆ. ವನದ ಮಾರ್ಗದಲ್ಲಿ ಹೋಗುವಾಗ ಅವರಿಗೆ ಒಂದು ಕಡೆ ಮೂಳೆಗಳ ರಾಶಿಯೇ ಕಾಣಿಸುತ್ತದೆ. ಇದನ್ನು ನೋಡಿ ಹೆದರಿದ ಸೀತಾ ಮಾತೆಯ ಇದೇನೆಂದು ಪ್ರಶ್ನೆ ಮಾಡಿದಳು. ಅದಕ್ಕೆ ಪ್ರಭುವು, "ಇದು ಋಷಿ ಮುನಿಗಳ ಅಸ್ಥಿ" ಎಂದು ಹೇಳಿದನು. ಅವರು ಯಜ್ಞ ಯಾಗಾದಿಗಳನ್ನು ಮಾಡುತ್ತಿರುವಾಗ ರಾಕ್ಷಸರು ಅವರನ್ನು ಕೊಂದು ಹಾಕಿದ್ದಾರೆ ಎಂದು ಶ್ರೀರಾಮನು ಹೇಳಿದನು. "ಆ ಸಂದರ್ಭದಲ್ಲಿ ಅಲ್ಲಿ ಕ್ಷತ್ರಿಯರಾರೂ ಇರಲಿಲ್ಲವೇ?" ಎಂದು ಸೀತಾ ಮಾತೆ ಮರು ಪ್ರಶ್ನೆ ಮಾಡಿದಳು. ಅದನ್ನೇ ಪ್ರಭು ಶ್ರೀರಾಮನು ಹೇಳಿದನು. "ಅದಕ್ಕಾಗಿಯೇ ತಾನು ಧನಸ್ಸನ್ನು ತ್ಯಾಗ ಮಾಡಲಿಲ್ಲ. ಹಲವು ಸಲ ಕೆಲವು ಕ್ಷತ್ರಿಯರು ತಮ್ಮ ಕರ್ತವ್ಯವನ್ನು ಮರೆತುಬಿಡುತ್ತಾರೆ. ಆಗ ಸಜ್ಜನರಿಗೆ ಈ ದುರ್ದೆಶೆ ಬರುತ್ತದೆ. ಆದ್ದರಿಂದ ಕ್ಷತ್ರಿಯನಾದವನು ಯಾವತ್ತೂ ಶಸ್ತ್ರ ತ್ಯಾಗ ಮಾಡಬಾರದು" ಎಂದು ಸೀತೆಯ ಅಂದಿನ ಪ್ರಶ್ನೆಗೆ ಇಂದು ಸರಿಯಾದ ಉತ್ತರ ಕೊಟ್ಟನು. ಭಗವಂತನು ಬರುವುದೇ ಸಜ್ಜನರ ರಕ್ಷಣೆಗಾಗಿ. ತಾನು ಸೃಷ್ಟಿಸಿದ ಜಗತ್ತಿನ ರಕ್ಷಣೆಗಾಗಿ ಪರಮಾತ್ಮನು ದಿವ್ಯರೂಪ ಧರಿಸಿ ಜನ್ಮವೆತ್ತುತ್ತಾನೆ.

ಪವನಸುತ ಹನುಮಂತನು "ಭಗವಂತನು ಭಕ್ತರಿಗಾಗಿ ಅವತಾರವೆತ್ತಿ ಬರುತ್ತಾನೆ" ಎಂದು ಹೇಳಿದ್ದಾನೆ. ಇದು ಕೂಡಾ ಸತ್ಯವೇ.

ಭಗವಂತನು ಧರ್ಮದ ಆಚರಣೆಯನ್ನು ಜಗತ್ತಿಗೆ ತೋರಿಸಲು, ಕರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿಯಲು, ಈ ಭೂಮಂಡಲದಲ್ಲಿ ಜನ್ಮವೆತ್ತಿ ಬರುತ್ತಾನೆ. "ನಮ್ಮ ಒಳಗಿರುವ ವಿವೇಕ ಬುದ್ಧಿಯನ್ನು ಜಾಗೃತಗೊಳಿಸಲು ಪರಮಾತ್ಮನನ್ನು ಕರೆಯಬೇಕು. ನಮ್ಮ ಅಂತರಾತ್ಮದಲ್ಲಿ ಧರ್ಮಸಂಸ್ಥಾಪನೆಗಾಗಿ ಭಗವಂತನನ್ನು ಸಾಕ್ಷಾತ್ಕಾರಗೊಳಿಸಬೇಕು" ಎಂದು ಪೂಜ್ಯ ಗುರುಗಳು ಹೇಳುತ್ತಾರೆ.

**ಮೀ ಅವಿವೇಕಾಚೀ ಕಾಜಳೀ**
**ಫೇಡೂನಿ ವಿವೇಕದೀಪ ಉಜಳೀ**

**ತೈ ಯೋಗಿಯಾ ಪಾಹೇ ದಿವಾಳೀ**
**ನಿರಂತರ // -** ಅವಿವೇಕವೆಂಬ ಕತ್ತಲೆಯನ್ನು ಓಡಿಸಿ ವಿವೇಕರೂಪವಾದ ದೀಪವನ್ನು ಬೆಳಗಿಸಿದಾಗ ಯೋಗಿಗಳಿಗೆ ನಿತ್ಯವೂ ದೀಪಾವಳಿ. ಎಂದರೆ ನಿರಂತರ ಆನಂದ ಅವರದಾಗುತ್ತದೆ. ಇದು ಜ್ಞಾನೇಶ್ವರ್ ಮಹಾರಾಜರ ಓವಿಯ ತಾತ್ಪರ್ಯ.

ಸಾಮಾನ್ಯ ಮನುಷ್ಯನು ತನ್ನ ಜೀವನದಲ್ಲಿ ಒಂದು ಶಿಸುಬ್ಧದ್ದ ನಿಯಮವನ್ನು ಪಾಲಿಸಬೇಕು. ಅವನು ತನ್ನ ಜೀವನದ ನಲವತ್ತು ಪ್ರತಿಶತ ಸದ್ಗುಣಗಳ ಸಂಪಾದನೆಗೆ, ಮೂವತ್ತು ಪ್ರತಿಶತ ನಿತ್ಯ ಕರ್ಮಗಳನ್ನು ನಿಭಾಯಿಸುವುದಕ್ಕೆ ಇನ್ನು ಇಪ್ಪತ್ತು ಪ್ರತಿಶತ ನಿಯೋಜಿತ ಕರ್ಮಗಳಿಗೆ, ಮತ್ತು ಕೊನೆಯ ಹತ್ತು ಪ್ರತಿಶತ ಪರಂಪರೆಯ ಉಳಿವಿಗಾಗಿ ಮೀಸಲಿಡಬೇಕು. ಆಗ ಪ್ರತಿಯೊಬ್ಬ ಮನುಷ್ಯನೂ ತನ್ನ ಜೀವನದಲ್ಲಿ ಧರ್ಮ ಸಂಸ್ಥಾಪನೆಯನ್ನು ಮಾಡಲು ಸಾಧ್ಯ.

**4.9**

**ಜನ್ಮ ಕರ್ಮ ಚ ಮೇ ದಿವ್ಯಮ್, ಏವಂ(ಮ್) ಯೋ ವೇತ್ತಿ ತತ್ತ್ವತಃ**
**ತ್ಯಕ್ತ್ವಾ ದೇಹಂ(ಮ್) ಪುನರ್ಜನ್ಮ, ನೈತಿ ಮಾಮೇತಿ ಸೋಽರ್ಜುನ ॥9॥**

ಎಲೈ ಅರ್ಜುನ ! ನನ್ನ ಈ ಜನ್ಮ ಮತ್ತು ಕರ್ಮದಿವ್ಯ ಅರ್ಥಾತ್ ಅಲೌಕಿಕವಾಗಿವೆ ಎಂಬುದಾಗಿ ಯಾವ ಪುರುಷನು ಯಥಾರ್ಥವಾಗಿ ತಿಳಿದುಕೊಳ್ಳುತ್ತಾನೆಯೋ ಅವನು ಶರೀರವನ್ನು ತ್ಯಜಿಸಿದ ಮೇಲೆ ಪುನಃ ಜನ್ಮವನ್ನು ಪಡೆಯುವುದಿಲ್ಲ ಆದರೆ ನನ್ನನ್ನೇ ಪಡೆಯುತ್ತಾನೆ.

ಭಗವಂತನ ಜನ್ಮ ಮತ್ತು ಕರ್ಮಗಳೆರಡೂ ದಿವ್ಯವಾದದ್ದು. ಹನುಮಂತನು ಹೇಳಿದಂತೆ, ಭಗವಂತನು ತನ್ನ ಭಕ್ತರಿಗಾಗಿ ಬರುತ್ತಾನೆ. ಹಾಗೆ ಭಕ್ತರ ಉದ್ಧಾರಕ್ಕೆ ಬಂದವನು ದುಷ್ಟ ಸಂಹಾರವನ್ನೂ ಮಾಡಿ ಹೋಗುತ್ತಾನೆ. ಶಬರಿಯನ್ನು ಉದ್ಧಾರ ಮಾಡಲು ಪ್ರಭು ಶ್ರೀರಾಮನು ಬಂದನು. ದುಷ್ಟರನ್ನು ಸಂಹರಿಸಿ, ಭಕ್ತರನ್ನೆಲ್ಲ ಹರಸಿ ಉದ್ಧರಿಸಿದನು. ಹೀಗೆ ಪರಮಾತ್ಮನ ಜನ್ಮವು ಅಲೌಕಿಕವಾದದ್ದು. ದಿವ್ಯವಾದ ಅವನ ಸ್ವರೂಪವನ್ನು, ಪರಮಾತ್ಮ ತತ್ತ್ವವನ್ನು ಸರಿಯಾಗಿ ತಿಳಿದುಕೊಂಡವನು, ಶರೀರವನ್ನು ತ್ಯಜಿಸಿದ ನಂತರ ಮತ್ತೆ ಹುಟ್ಟುವುದಿಲ್ಲ ಅವನು ಈ ಜನನ ಮರಣಗಳ ಚಕ್ರದಿಂದ ಪಾರಾಗಿ ಹೋಗುತ್ತಾನೆ. ಅವನು ಕೊನೆಯಲ್ಲಿ ಪರಮಾತ್ಮನನ್ನೇ ಸೇರುತ್ತಾನೆ.

**4.10**

**ವೀತರಾಗಭಯಕ್ರೋಧಾ, ಮನ್ಮಯಾ ಮಾಮುಪಾಶ್ರಿತಾಃ**
**ಬಹವೋ ಜ್ಞಾನತಪಸಾ, ಪೂತಾ ಮದ್ಭಾವಮಾಗತಾಃ ॥10॥**

ಆಸಕ್ತಿ ಭಯ ಮತ್ತು ಕ್ರೋಧಗಳಿಲ್ಲದೆ ಅನನ್ಯಭಾವದಿಂದ ನನ್ನಲ್ಲಿಯೇ ದೃಢವಾದ ಮನಸುಳ್ಳವರಾಗಿದ್ದು ನನಗೆ ಶರಣಾಗತರಾದ ಅನೇಕ ಪುರುಷರು ಜ್ಞಾನರೂಪೀ ತಪಸ್ಸಿನಿಂದ ಪವಿತ್ರರಾಗಿ ನನ್ನ ಸ್ವರೂಪವನ್ನು ಪಡೆದು ಕೊಂಡಿದ್ದಾರೆ.

ಶರೀರವನ್ನು ತ್ಯಜಿಸಿದವರ ಬಗ್ಗೆ ಹೇಳಿದ ಪರಮಾತ್ಮನು ಈಗ ಜೀವನಕ್ರಮದಲ್ಲಿ ಇದ್ದವರ ಬಗ್ಗೆ ಹೇಳುತ್ತಾನೆ.

ಆಸಕ್ತಿ ರಹಿತನು ಸದಾ ಆನಂದದಿಂದ ಇರಬಲ್ಲನು. ಆಸೆ ಅಥವಾ ವಿಷಯಗಳಲ್ಲಿ ಆಸಕ್ತಿಯೇ ಮನುಷ್ಯನಲ್ಲಿ ಭಯ, ಕ್ರೋಧಗಳನ್ನು ಹುಟ್ಟು ಹಾಕುತ್ತದೆ. ಯಾವುದೇ ಕಾರ್ಯದಲ್ಲಿ ಆಸಕ್ತಿ ಅಥವಾ ಅದರ ಪರಿಣಾಮದಲ್ಲಿ ಆಸೆ ಇದ್ದಾಗ ಆ ಕಾರ್ಯದ ಪ್ರತಿಯಾಗಿ ಭಯ ಹುಟ್ಟುತ್ತದೆ. ಕಾರ್ಯವು ಸರಿಯಾಗಿ ನಡೆಯದೇ ಇದ್ದರೆ ಎಂಬ ಆತಂಕ ಕಾಡುತ್ತದೆ. ಅದೇ ರೀತಿಯಲ್ಲಿ ಕಾರ್ಯದ ಪರಿಣಾಮವು ಕ್ರೋಧಕ್ಕೆ ಕಾರಣವಾಗುತ್ತದೆ. ಮಾಡಿದ ಕೆಲಸದಿಂದ ತಕ್ಕ ಫಲವು ಸಿಗದೇ ಇದ್ದಾಗ, ಪರಿಸ್ಥಿತಿಯ ಮೇಲೆ, ಪರಿಸರದ ಮೇಲೆ ಅಷ್ಟೇ ಏಕೆ ಮನುಷ್ಯ ತನ್ನ ಮೇಲೆಯೇ ಸಿಟ್ಟು ಮಾಡಿಕೊಳ್ಳುತ್ತಾನೆ. ಆದ್ದರಿಂದ ಎಲ್ಲಕ್ಕೂ ಮುಖ್ಯ ಕಾರಣ ವಿಷಯಾಸಕ್ತಿ, ಇದಕ್ಕೆ 'ರಾಗ' ಎಂದು ಹೇಳುತ್ತೇವೆ. ರಾಗದ್ವೇಷಗಳಿಂದ ಮುಕ್ತರಾದವರು, ಮನಃ ಪೂರ್ವಕವಾಗಿ ಭಗವಂತನನ್ನು ನಿತ್ಯ ಸ್ಮರಣೆ ಮಾಡಿ, ಜ್ಞಾನದ ತಪಸ್ಸಿನಿಂದ ಪರಿಶುದ್ಧರಾದವರು, ಜೀವಂತವಾಗಿ ಇರುವಾಗಲೇ ಭಗವದ್ ಪ್ರೇಮಕ್ಕೆ ಅರ್ಹರಾಗುತ್ತಾರೆ. ಸಂತ

ಮಹಾಪುರುಷರು ಕ್ರೋಧವನ್ನು ತ್ಯಜಿಸಿ ಅನ್ಯರನ್ನು ಕ್ಷಮಿಸಿ, ತಮ್ಮ ಉದಾರತೆ ಮೆರೆದಿರುವ ಹಲವು ನಿದರ್ಶನಗಳು ನಮಗೆ ಕಾಣಸಿಗುತ್ತವೆ. ಸಂತ ಏಕನಾಥ ಮಹಾರಾಜರಿಗೆ ಸಿಟ್ಟು ತರಿಸಲು ಅವರ ಸುತ್ತಲಿನ ಜನರಲ್ಲಿ ಪೈಪೋಟಿಯೇ ನಡೆಯುತಿತ್ತಂತೆ. ಅವರ ಮನೆಯ ಒಳಗೆ ಚಪ್ಪಲಿಯನ್ನು ಹಾಕಿಕೊಂಡು ಹೋಗುತಿದ್ದರಂತೆ. ಅವರು ಊಟ ಮಾಡುವ ಸಮಯದಲ್ಲಿ ಹೋಗಿ ತೊಂದರೆ ಕೊಡುತಿದ್ದರು. ಆದರೂ ಕಿಂಚಿತ್ ಕೂಡಾ ಸಿಟ್ಟನ್ನು ಮಾಡಿಕೊಳ್ಳದೇ ಎಲ್ಲರಲ್ಲಿಯೂ ಪರಬ್ರಹ್ಮ ಪರಮಾತ್ಮನನ್ನು ಕಂಡು ಶಾಂತ ಮೂರ್ತಿ ಎನಿಸಿಕೊಂಡವರು ಏಕನಾಥ ಮಹಾರಾಜರು. ಸಾಕ್ಷಾತ್ ಪರಮಾತ್ಮನ ಸ್ವರೂಪರಾದರು. ಪರಮಾತ್ಮನ ಚಿಂತನೆ ನಡೆಸುತ್ತಾ ಶಾಂತಿ ಸಮಾಧಾನದಿಂದ ಜೀವನ ನಡೆಸಿದಾಗ ನಾವೂ ಪರಮಾತ್ಮ ತತ್ತ್ವದಲ್ಲಿ ಒಂದಾಗಿ ಹೋಗಲು ಸಾಧ್ಯ. ಈ ತತ್ತ್ವದೊಡನೆ ಇಂದಿನ ವಿವೇಚನ ಸತ್ರವನ್ನು ಮುಕ್ತಾಯಗೊಳಿಸಲಾಯಿತು.

**ಪ್ರಶ್ನೋತ್ತರಗಳು**

**ಸಪ್ನಾ ಅಕ್ಕಾ**

**ಪ್ರಶ್ನೆ:** ಪಿತಾಮಹ ಭೀಷ್ಮರು ಕೃಷ್ಣನ ಪರಮ ಭಕರ್ತಾಗಿದ್ದರು. ಆದರೂ ಅಧರ್ಮದ ಜೊತೆ ನಿಂತರು. ಭಗವಂತನು ಅವರ ಮನಃ ಪರಿವರ್ತನೆಯನ್ನು ಏಕೆ ಮಾಡಲಿಲ್ಲ? ಹೀಗೆ ಯಾಕೆ ಅವರ ಅಂತ್ಯವಾಯಿತು? ಭಗವಂತನು ಅದನ್ನು ಏಕೆ ತಪ್ಪಿಸಲಿಲ್ಲ?

**ಉತ್ತರ :** ಪಿತಾಮಹ ಭೀಷ್ಮರು ಕೃಷ್ಣ ಭಕರ್ತಾಗಿದ್ದರು. ಆದರೆ ಅವರು ನೀತಿ ಪಾಲಕರಾಗಿದ್ದರು. ಅವರು ತಮ್ಮ ತಾಯಿಯಾದ ಸತ್ಯವತಿ ದೇವಿಗೆ ಮಾತು ಕೊಟ್ಟಿದ್ದರು. ತಾನು ಸದಾ, ಜೀವ ಇರುವವರೆಗೆ ಹಸ್ತಿನಾವತಿಯ ರಾಜ ಸಿಂಹಾಸನಕ್ಕೆ ಬದ್ಧನಾಗಿರುತ್ತೇನೆ. ಸದಾ ಅದರ ರಕ್ಷೆಯೇ ನನ್ನ ಕರ್ತವ್ಯ ಎಂದು ಪ್ರತಿಜ್ಞೆ ಮಾಡಿದ್ದರು. ಭಗವಂತನು ಅರ್ಜುನನಿಗೂ ಹೇಳಿದ್ದು "ತಾನು ಇಷ್ಟೆಲ್ಲಾ ಹೇಳಿದ್ದೇನೆ. ಮುಂದೆ ಅಂತಿಮ ನಿರ್ಧಾರ ನಿನ್ನದೇ" ಎಂದು. ಮತ್ತು ಅರ್ಜುನನು ಭಗವಂತನಲ್ಲಿ ಸಂಪೂರ್ಣ ಶರಣಾಗಿದ್ದನು. ಆದರೂ ಭಗವಂತನು ಹೀಗೆ ಹೇಳಿದನು. ಪಿತಾಮಹ ಭೀಷ್ಮರು ಭಕರ್ತಾಗಿದ್ದರು. ಆದರೆ ಭಗವಂತನಲ್ಲಿ ಬಂದು ತಾನು ಏನು ಮಾಡಲಿ ಎಂದು ಕೇಳಿರಲಿಲ್ಲ. ಅವರ ಸ್ವಾರ್ಥಕ್ಕಾಗಿ ಅಲ್ಲದಿದ್ದರೂ ಅವರ ಪ್ರತಿಜ್ಞೆಯಿಂದ ಅವರು ಬದ್ಧರಾಗಿದ್ದರು. ಮತ್ತು ಪ್ರತಿಯೊಂದು ಜೀವಿಗೂ ತನ್ನ ಜೀವನದ ನಿರ್ಧಾರವನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಭಗವಂತನು ಕೊಟ್ಟಿರುತ್ತಾನೆ. ಆದ್ದರಿಂದ ಅವರ ಕರ್ಮಗಳಿಗೆ ಅವರೇ ಹೊಣೆ. ಪಿತಾಮಹ ಭೀಷ್ಮರೂ ಸಹ ಅವರ ಕರ್ಮದ ಅನುಸಾರ ಅಂತ್ಯವನ್ನು ಕಂಡರು. ಭಗವಂತನು ಅಲ್ಲಿ ಬೇರೆ ಏನೂ ಮಾಡುವ ಹಾಗಿರಲಿಲ್ಲ.

**ಮಾಧವಿ ಅಕ್ಕಾ**

**ಪ್ರಶ್ನೆ** : ಗ್ರಹಣ ಕಾಲದಲ್ಲಿ ಭಗವದ್ಗೀತೆಯ ಪಠಣೆ ಮಾಡಬಹುದೇ? ಗ್ರಹಣ ಕಾಲದಲ್ಲಿ ಜಪ ಮಾಡಲು ಅನುಮತಿಯಿದೆ. ಭಗವದ್ಗೀತೆ ಪಠಣಕ್ಕೆ ಉಂಟೆ?

**ಉತ್ತರ** : ಭಗವದ್ಗೀತೆಯು ಪಠಣವೂ ಹೌದು, ಜಪವೂ ಹೌದು. ಆದ್ದರಿಂದ ಗ್ರಹಣ ಕಾಲದಲ್ಲಿ ಭಗವದ್ಗೀತೆಯ ಜಪವನ್ನು ಮಾಡಬಹುದು.

---



ಅರ್ಥ ವ್ಯಾಖ್ಯಾನದ ನಮ್ಮ ಈ ರಚನೆ ನಿಮಗೆ ತೃಪ್ತಿ ನೀಡಿದೆ ಎಂದು ಭಾವಿಸುತ್ತೇವೆ. ದಯಮಾಡಿ ಈ ಕೆಳಗಿನ ಕೊಂಡಿ ಬಳಸಿ ನಿಮ್ಮ ಪ್ರತಿಕ್ರಿಯೆ ನೀಡಬೇಕೆಂದು ವಿನಂತಿ.

**https://vivechan.learngeeta.com/feedback/**

**ಈ ಸಾರಾಂಶವನ್ನು ಓದಿದ್ದಕ್ಕಾಗಿ ನಿಮಗೆ ಧನ್ಯವಾದಗಳು**

ಅರ್ಥ ವಿವೇಚನೆಯ ಈ ಬರಹವನ್ನು ನೀವು ಆನಂದಿಸಿರುವಿರೆಂದು ಭಾವಿಸುತ್ತೇವೆ. ಬರಹದಲ್ಲಿ ದೋಷಗಳು ನುಸುಳದಂತೆ ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಿದ್ದೇವೆ. ಆದರೂ, ಸಣ್ಣಪುಟ್ಟ ತಪ್ಪುಗಳಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಅವುಗಳನ್ನು ನಿರ್ಲಕ್ಷಿಸಿ ಸಹಕರಿಸಬೇಕೆಂದು ವಿನಂತಿ.

---

**ಜೈ ಶ್ರೀಕೃಷ್ಣ!**
ಸಂಕಲನ : ಗೀತಾ ಪರಿವಾರದ ಸೃಜನಾತ್ಮಕ ಬರವಣಿಗೆಯ ತಂಡ

---

**ಪ್ರತಿ ಮನೆಯಲ್ಲಿ ಗೀತೆ, ಪ್ರತಿ ಕರದಲ್ಲಿ ಗೀತೆ !**
ಗೀತಾ ಪರಿವಾರದ ಧ್ಯೇಯವನ್ನು ಪಸರಿಸಲು ನಾವೆಲ್ಲಾ ಒಂದಾಗೋಣ. ನಮ್ಮ ಬಂಧು-ಮಿತ್ರರಿಗೆ ಗೀತಾ ತರಗತಿಗಳ ಉಡುಗೊರೆಯನ್ನು ನೀಡೋಣ.

**https://gift.learngeeta.com/**

---

ಗೀತಾ ಪರಿವಾರ ಹೊಸ ಕ್ರಮ ಕೈಗೊಂಡಿದೆ. ಈ ಹಿಂದಿನ ಎಲ್ಲ ಅರ್ಥ ವಿವೇಚನೆಗಳ ಯೂಟ್ಯೂಬ್ ವೀಡಿಯೋಗಳನ್ನು ವೀಕ್ಷಿಸಬಹುದು ಹಾಗು ಪಿಡಿಎಫ್ ಆವೃತ್ತಿಯ ಬರಹಗಳನ್ನು ಓದಬಹುದು. ಇದಕ್ಕಾಗಿ ಕೆಳಗಾಣಿಸಿದ ಲಿಂಕ್ ಬಳಸಿರಿ.

**https://vivechan.learngeeta.com/**

---

**ಗೀತೆ ಕಲಿಯಿರಿ, ಗೀತೆ ಹರಡಿರಿ, ಗೀತೆ ಜೀವಿಸಿರಿ**
**|| ಓಂ ಶ್ರೀ ಕೃಷ್ಣಾರ್ಪಣಮಸ್ತು ||**